ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2015–16ನೇ ಸಾಲಿನ ನಗರೋತ್ಥಾನ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ, ಬ್ಯಾಟರಾಯನಪುರ ವಿಭಾಗದ ವ್ಯಾಪ್ತಿಯಲ್ಲಿನ ವಾರ್ಡ್ ನಂ. 09, 10 ಮತ್ತು 11 ರಲ್ಲಿನ ಒಟ್ಟು 28 ಕಾಮಗಾರಿಗಳು Package-6 (Indent No. 26622) ರ ಕಾಮಗಾರಿಗಳಿಗೆ ಆಡಳಿತಾತ್ಮಕ ಹಾಗೂ ಟೆಂಡರ್‌ಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ: ನಅಇ 279 ಎಸ್‌ಎಫ್‌ಸಿ 2015, ದಿನಾಂಕ: 08–01–2016.
2. ಸರ್ಕಾರದ ಆದೇಶ ಸಂಖ್ಯೆ: ನಅಇ 73 ಎಸ್‌ಎಫ್‌ಸಿ 2016, ದಿನಾಂಕ: 04–03–2016.
3. ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ–1), ದಿನಾಂಕ: 21–06–2016.
4. ಆಯುಕ್ತರು, ಜಿ.ಜಿ.ಎಂ.ಪಿ. ಪತ್ರ ಸಂಖ್ಯೆ: ಪ್ರ.ಅ/ಪಿಆರ್/6610/2017–18, ದಿನಾಂಕ: 17–10–2017.
5. ದಿನಾಂಕ: 07–11–2017 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿ.

* * * * *

ಪ್ರಸ್ತಾವನೆ:

ಮೇಲೆ (1) ರಲ್ಲಿ ಓದಲಾದ ದಿನಾಂಕ: 08–01–2016ರ ಆದೇಶದಲ್ಲಿ ಸರ್ಕಾರವು 2015–16ನೇ ಸಾಲಿನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಘೋಷಿಸಿರುವ ರೂ.1500.00 ಕೋಟಿಗಳ ಅನುದಾನದ ಪೈಕಿ ರೂ.976.00 ಕೋಟಿಗಳ ವೆಚ್ಚದಲ್ಲಿ ಕೈಗೊಳ್ಳುವ ಒಟ್ಟು 13 ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದ್ದು "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಹಿಂದಿನ 7 ಸಿಎಂಸಿ ಪ್ರದೇಶಗಳು ಹಾಗೂ 1 ಟಿಎಂಸಿ ಪ್ರದೇಶವನ್ನು ಅಭಿವೃದ್ಧಿಪಡಿಸುವುದು" ಕಾಮಗಾರಿಗಳಿಗೆ ರೂ.250.00 ಕೋಟಿಗಳ ಅನುದಾನವನ್ನು ಕೆಲವೊಂದು ಷರತ್ತುಗಳನ್ನು ವಿಧಿಸಿ ನಿಗದಿಪಡಿಸಲಾಗಿರುತ್ತದೆ

2. ಮೇಲೆ (2) ರಲ್ಲಿ ಓದಲಾದ ದಿನಾಂಕ: 04–03–2016ರ ಆದೇಶದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡು 7 ಸಿಎಂಸಿ ಮತ್ತು 1 ಟಿಎಂಸಿ ಪ್ರದೇಶಗಳ ಸಮಗ್ರವಾಗಿ ಅಭಿವೃದ್ಧಿಗೆ ರೂ.250.00 ಕೋಟಿಗಳ ಅನುದಾನದ ಪೈಕಿ ಬ್ಯಾಟರಾಯನಪುರ, ರಾಜರಾಜೇಶ್ವರಿನಗರ, ಕೆ.ಆರ್. ಪುರ, ಯಶವಂತಪುರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ರೂ.175.00 ಕೋಟಿಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳುವ ಕಾಮಗಾರಿಯ ಕ್ರಿಯಾ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಸದರಿ ಆದೇಶದಲ್ಲಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರೂ.4000.00 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳುವ ಒಟ್ಟು 62 ಕಾಮಗಾರಿಗಳ ಕ್ರಿಯಾ

ಯೋಜನೆಗೆ ಅನುಮೋದನೆಯನ್ನು ನೀಡಲಾಗಿದ್ದು, ವಾರ್ಡ್ ಸಂಖ್ಯೆ: 09 (ಕ್ರಮ ಸಂಖ್ಯೆ: 34, 35, 36, 37, 38, 39, 40, 41, 42, 43, 44, 45, 47 ಮತ್ತು 48) ಮತ್ತು ವಾರ್ಡ್ ಸಂಖ್ಯೆ: 10ರ (ಕ್ರಮ ಸಂಖ್ಯೆ: 50 ಮತ್ತು 51) ಮತ್ತು ವಾರ್ಡ್ ಸಂಖ್ಯೆ: 11 (ಕ್ರಮ ಸಂಖ್ಯೆ: 52, 53, 54, 55, 56, 57, 58, 59, 60, 61 ಮತ್ತು 62) ವ್ಯಾಪ್ತಿಗೆ ಕೈಗೊಳ್ಳುವ ಒಟ್ಟು 28 ಕಾಮಗಾರಿಗಳಿಗೆ ರೂ.1425.00 ಲಕ್ಷಗಳನ್ನು ನಿಗಧಿಪಡಿಸಲಾಗಿರುತ್ತದೆ.

3. ಮೇಲೆ (3) ರಲ್ಲಿ ಓದಲಾದ ದಿನಾಂಕ: 21-06-2016ರ ಆದೇಶದಲ್ಲಿ ನಗರೋತ್ಥಾನ ಯೋಜನೆ, ವಿಶೇಷ ಮೂಲಭೂತ ಸೌಕರ್ಯಕ್ಕೆ ಬಂಜಾರ ಬೆಂಬಲ ಮತ್ತು ಸರೋವರ ಅಭಿವೃದ್ಧಿ ಯೋಜನೆಯಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 2016-17 ಮತ್ತು 2017-18ನೇ ಸಾಲಿನಲ್ಲಿ ಒಟ್ಟು ರೂ.7300 ಕೋಟಿಗಳ ಆದಾಯ ವೆಚ್ಚದಲ್ಲಿ ಕೈಗೊಳ್ಳುವ ಕಾಮಗಾರಿಗಳ ಕ್ರಿಯಾ ಯೋಜನೆಗೆ ಕೆಲವೊಂದು ಷರತ್ತುಗಳನ್ನು ವಿಧಿಸಿ ಅನುಮೋದನೆಯನ್ನು ನೀಡಲಾಗಿದ್ದು, ಅನುಬಂಧ-II (Spillover works)ರ ಕ್ರಮ ಸಂಖ್ಯೆ: 04 ರಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡು 7 ಸಿಎಂಸಿ ಮತ್ತು 1 ಟಿಎಂಸಿ ಪ್ರದೇಶಗಳ ಸಮಗ್ರತಾ ಅಭಿವೃದ್ಧಿಪಡಿಸುವ ಕಾಮಗಾರಿಗಳಿಗೆ ರೂ.250.00 ಕೋಟಿಗಳ ಅನುದಾನವನ್ನು ಮುಂದುವರೆಸಿ ನಿಗದಿಪಡಿಸಲಾಗಿರುತ್ತದೆ.

4. ಮೇಲೆ (4) ರಲ್ಲಿ ಓದಲಾದ ದಿನಾಂಕ: 17-10-2016ರ ಪತ್ರದಲ್ಲಿ, ಬ್ಯಾಟರಾಯನಪುರ ವಿಭಾಗದ ವ್ಯಾಪ್ತಿಯಲ್ಲಿನ ವಾರ್ಡ್ ನಂ. 09, 10 ಮತ್ತು 11 ರಲ್ಲಿನ ಒಟ್ಟು 28 ಕಾಮಗಾರಿಗಳು Package-6 (Indent No. 26622) ರ ಕಾಮಗಾರಿಗಳಿಗೆ ಸರ್ಕಾರದ ಆದೇಶದ ಸಂಖ್ಯೆ: ನಅಇ 73 ಎಸ್ಎಫ್ಸಿ 2016, ದಿನಾಂಕ: 04-03-2016 ರಲ್ಲಿ ಲೆಕ್ಕ ಶೀರ್ಷಿಕೆ: P3089 Special Development Works in 7 CMC & TMC area ಅಡಿಯಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ರೂ.1425.00 ಲಕ್ಷಗಳು ಮಂಜೂರಾಗಿರುತ್ತವೆ. ಅದರಂತೆ, ಬ್ಯಾಟರಾಯನಪುರ ವಿಭಾಗದ ಕಚೇರಿಯಿಂದ ದಿನಾಂಕ: 24-07-2017 ರಂದು ದ್ವಿಲಕೋಟೆ ಇ-ಪ್ರಕ್ಯೂರ್‌ಮೆಂಟ್ ಪದ್ಧತಿಯಲ್ಲಿ ರೂ.13,59,92,759.33/- ಲಕ್ಷಗಳಿಗೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಸದರಿ Package-6, Indent No. 26622 ರ ಕಾಮಗಾರಿಗಳ ತಾಂತ್ರಿಕ ಬಿಡ್‌ನ್ನು ದಿನಾಂಕ: 01-09-2017 ರಂದು ತೆರೆಯಲಾಗಿದ್ದು, ಟೆಂಡರ್‌ನಲ್ಲಿ 11 ಜನ ಬಿಡ್‌ದಾರರು ಭಾಗವಹಿಸಿರುತ್ತಾರೆ. ಅದರಲ್ಲಿ ಬಿಡ್ ದಾರರಾದ (1) ಶ್ರೀ ಸಿ.ಆರ್. ಗಿರೀಶ್ (ರಾಮ್ ಅಂಡ್ ಕಂಪನಿ) ಮತ್ತು (2) ಶ್ರೀ ಪ್ರಮೋದ್ (ಕಾರ್ತಿಕ್ ಎಂಟರ್ ಪ್ರೈಸಸ್) ಇವರು ತಾಂತ್ರಿಕವಾಗಿ ಅರ್ಹತೆ ಹೊಂದಿರುವುದರಿಂದ ಸಮಿತಿಯವರ ತಾಂತ್ರಿಕ ಬಿಡ್‌ನ್ನು ಅಂಗೀಕರಿಸಿ ಆರ್ಥಿಕ ಬಿಡ್‌ನ್ನು ತೆರೆಯಲು ಆಯುಕ್ತರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಸದರಿ ಸಭೆಯ ನಿರ್ಣಯದಂತೆ ತಾಂತ್ರಿಕವಾಗಿ ಅರ್ಹರಾದ ಗುತ್ತಿಗೆದಾರರ ಆರ್ಥಿಕ ಬಿಡ್‌ನ್ನು ದಿನಾಂಕ: 10-10-2017 ರಂದು ತೆರೆಯಲಾಗಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತವೆ.

ಕ್ರ ಸಂ.	ತಾಂತ್ರಿಕ ಪರಿಶೀಲನಾ ಸಮಿತಿಯಲ್ಲಿ ಅರ್ಹರಾದ ಗುತ್ತಿಗೆದಾರರು	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಟೆಂಡರ್‌ಗೆ ಬಿಟ್ಟ ಮೊತ್ತ (ರೂ.ಗಳಲ್ಲಿ)	ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ (ರೂ.ಗಳಲ್ಲಿ)	ಅನುಮೋದಿತ ಎಸ್.ಆರ್. ದರಗಳಿಗೆ ಹೋಲಿಸಿದಾಗ
1.	ಶ್ರೀ ಸಿ.ಆರ್. ಗಿರೀಶ್ (ರಾಮ್ ಅಂಡ್ ಕಂಪನಿ)	1425.00	13,59,92,759.33	14,66,08,436.03	+7.50% ಹೆಚ್ಚು
2.	ಶ್ರೀ ಪ್ರಮೋದ್ (ಕಾರ್ತಿಕ್ ಎಂಟರ್ ಪ್ರೈಸಸ್)			15,63,89,014.24	+14.99% ಹೆಚ್ಚು

5. ಮೇಲ್ಕಂಡ ಕಾಮಗಾರಿಗೆ ಎಲ್-1 ಗುತ್ತಿಗೆದಾರರಾದ ಶ್ರೀ ಸಿ.ಆರ್. ಗಿರೀಶ್ (ರಾಮ್ ಅಂಡ್ ಕಂಪನಿ) ರವರು ನಮೂದಿಸಿರುವ ಟೆಂಡರ್ ಮೊತ್ತ ರೂ.14,66,08,436.03/- ಗಳನ್ನು ನಮೂದಿಸಿದ್ದು, ಈ ಮೊತ್ತವನ್ನು ಅನುಮೋದಿತ ದರಗಳಿಗೆ ಹೋಲಿಸಿದಾಗ ಶೇ.7.80% ರಷ್ಟು ಹೆಚ್ಚಾಗಿರುತ್ತದೆ. ಕಾಮಗಾರಿಗಳ ಅಂದಾಜು ಮೊತ್ತ ರೂ.1425.00 ಲಕ್ಷಗಳನ್ನು ಆಡಳಿತಾತ್ಮಕ ಹಾಗೂ ಗುತ್ತಿಗೆದಾರರು ನಮೂದಿಸಿರುವ ಟೆಂಡರ್ ಮೊತ್ತ ರೂ.14,66,08,436.03/- ಗಳ ಟೆಂಡರ್‌ಗೆ ಅನುಮೋದನೆ ನೀಡುವಂತೆ ಕೋರಿರುತ್ತಾರೆ.

6. ಮೇಲೆ (5) ರಲ್ಲಿ ಓದಲಾದ ದಿನಾಂಕ: 07-11-2017 ರಂದು ನಡೆದ ಅಧಿಕಾರಿಯುಕ್ತ ಸಮಿತಿಯ ಸಭೆಯಲ್ಲಿ ವಿಷಯವನ್ನು ಚರ್ಚಿಸಿ ನಿರ್ಣಯಿಸಿದಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ನಅಇ 633 ಎಂಎನ್‌ಪೈ 2017,
ಬೆಂಗಳೂರು, ದಿನಾಂಕ: 11-12-2017.

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, 2015-16ನೇ ಸಾಲಿನ ಆಯವ್ಯಯದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಗೊಂಡ ನಗರಸಭೆ ಮತ್ತು ಪುರಸಭೆ ಪ್ರದೇಶಗಳ ಅಭಿವೃದ್ಧಿಗಾಗಿ ಘೋಷಿಸಿರುವ ವಿಶೇಷ ಅನುದಾನದಲ್ಲಿ ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 73 ಎಸ್‌ಎಫ್‌ಸಿ 2016, ದಿನಾಂಕ: 04-03-2016 ರ ಕ್ರಿಯಾ ಯೋಜನೆಯಲ್ಲಿ ಅನುಮೋದನೆ ನೀಡಿರುವ ವಾರ್ಡ್ ಸಂಖ್ಯೆ: 09 (ಕ್ರಮ ಸಂಖ್ಯೆ: 34, 35, 36, 37, 38, 39, 40, 41, 42, 43, 44, 45, 47 ಮತ್ತು 48) ಮತ್ತು ವಾರ್ಡ್ ಸಂಖ್ಯೆ: 10ರ (ಕ್ರಮ ಸಂಖ್ಯೆ: 50 ಮತ್ತು 51) ಮತ್ತು ವಾರ್ಡ್ ಸಂಖ್ಯೆ: 11 (ಕ್ರಮ ಸಂಖ್ಯೆ: 52, 53, 54, 55, 56, 57, 58, 59, 60, 61 ಮತ್ತು 62.)ರ Package-6 (Indent No. 26622) ರ ಕಾಮಗಾರಿಗಳ ಅಂದಾಜು ಮೊತ್ತ ರೂ.14.25 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಅಧಿಕಾರಿಯುಕ್ತ ಸಮಿತಿಯು ಎಲ್-1 ಗುತ್ತಿಗೆದಾರರಾದ ಶ್ರೀ ಸಿ.ಆರ್. ಗಿರೀಶ್ (ರಾಮ್ ಅಂಡ್ ಕಂಪನಿ) ರವರು ನಮೂದಿಸಿರುವ ಅಂತಿಮ ಮೊತ್ತ ರೂ.14.28 ಕೋಟಿಗಳು, 2016-17ನೇ ಸಾಲಿನ ದರಗಳಿಗೆ ಹೋಲಿಸಿದಾಗ ಶೇಕಡಾ 5% ರಷ್ಟು ಹೆಚ್ಚಿನ ದರಗಳಿಗೆ ಮಿತಿಗೊಳಿಸಿ, ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಟೆಂಡರ್‌ಗೆ ಸರ್ಕಾರದ ಅನುಮೋದನೆ ನೀಡಿದೆ.

1. ಮೇಲಿನ ಕಾಮಗಾರಿಯನ್ನು ಕೆ.ಟಿ.ಪಿ.ಪಿ. ಕಾಯ್ದೆ/ನಿಯಮಗಳು ಹಾಗೂ ಜಿಲ್ಲಾ ಪಂಚಾಯತ್ ನಿಯಮಗಳನ್ನು ಪಾಲಿಸಿಕೊಂಡು ಅನುಷ್ಠಾನಗೊಳಿಸುವುದು.

2. ಈ ಕಾಮಗಾರಿಗೆ ತಗಲುವ ವೆಚ್ಚವನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 199 ಎಸ್‌ಎಫ್‌ಸಿ 2016 (ಭಾಗ-1), ದಿನಾಂಕ: 21-06-2016 ರಲ್ಲಿ 2016-17ನೇ ಸಾಲಿನಲ್ಲಿ ಮೀಸಲಿಟ್ಟ ನಗರೋತ್ಥಾನ ಯೋಜನೆಯ ಅನುದಾನದಿಂದ ಭರಿಸುವುದು ಹಾಗೂ ಹೆಚ್ಚುವರಿ ಟೆಂಡರ್ ಪ್ರೀಮಿಯಂ ಮೊತ್ತವನ್ನು ಪಾಲಿಕೆಯು ತನ್ನ ಸ್ವಂತ ನಿಧಿಯಿಂದಲೇ ಭರಿಸತಕ್ಕದ್ದು.

3. ಮೇಲಿನ ಕಾಮಗಾರಿಯನ್ನು ಸರ್ಕಾರದಿಂದ ಮಂಜೂರಾದ ಮೊತ್ತದ ಮಿತಿಯಲ್ಲಿಯೇ ಯಾವುದೇ ಹೆಚ್ಚುವರಿಯಾಗದಂತೆ ಅನುಷ್ಠಾನಗೊಳಿಸಲು ಕ್ರಮವಹಿಸತಕ್ಕದ್ದು.

4. ಸರ್ಕಾರವು ಕಾಮಗಾರಿಗಳಿಗೆ ಆಡಳಿತಾತ್ಮಕ ಮತ್ತು ಟೆಂಡರ್‌ಗಳಿಗೆ ಅನುಮೋದನೆ ನೀಡಿದ್ದಾಗ್ಯೂ ಸದರ ಕಾಮಗಾರಿಯು ಪುನರಾವರ್ತನೆ ಆಗದಂತೆ ನೋಡಿಕೊಳ್ಳತಕ್ಕದ್ದು. ಅನುಮೋದನೆಗೊಂಡಿರುವ ಕಾಮಗಾರಿಯನ್ನಲ್ಲದೆ ಯಾವುದೇ ಕಾರಣಕ್ಕೆ ಬೇರೆ ಕಾಮಗಾರಿಗಳನ್ನು ಕೈಗೊಳ್ಳಬಾರದೆಂದು ತಿಳಿಸಿದೆ.

...4...

5. ಮೇಲಿನ ಕಾಮಗಾರಿಗೆ 3rd Party Quality Monitors ಗಳನ್ನು ನೇಮಿಸಿಕೊಂಡು ಉತ್ತಮ ಗುಣಮಟ್ಟದಿಂದ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸತಕ್ಕದ್ದು.

6. ದಿನಾಂಕ: 07-11-2017ರ ಅಧಿಕಾರಯುಕ್ತ ಸಮಿತಿ ಸಭೆಯ ನಡವಳಿಯಲ್ಲಿ ನಮೂದಿಸಿರುವ ಎಲ್ಲಾ ಷರತ್ತು ಹಾಗೂ ನಿಬಂಧನೆಗಳನ್ನು ತಪ್ಪದೆ ಪಾಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಕೆ. ವಿಕಾಸ್ ಕುಮಾರ್)
ಸರ್ಕಾರದ ಅಧೀನ ಕಾರ್ಯದರ್ಶಿ.
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

ಇವರಿಗೆ:

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
4. ಮಾನ್ಯ ಬೆಂಗಳೂರು ಅಭಿವೃದ್ಧಿ ಮತ್ತು ನಗರ ಯೋಜನಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
6. ವಿಶೇಷ ಆಯುಕ್ತರು (ಯೋಜನೆ), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಪ್ರಧಾನ ಅಭಿಯಂತರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ 3 ಮತ್ತು 9) ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
11. ಸರ್ಕಾರದ ಉಪ ಕಾರ್ಯದರ್ಶಿಗಳು-3 ರವರ ಆಪ್ತ ಸಹಾಯಕರು, ನಗರಾಭಿವೃದ್ಧಿ ಇಲಾಖೆ.
12. ಅಧೀಕ್ಷಕ ಅಭಿಯಂತರರು (ತಾಂತ್ರಿಕ ಕೋಶ), ನಗರಾಭಿವೃದ್ಧಿ ಇಲಾಖೆ.
13. ರಾಜಾ ರಕ್ಷಾ ಕಡತ/ಪೆಚ್ಚುವರಿ ಪ್ರತಿಗಳು.